**All India Radio: Bangalore**
**National Bulletin In Kannada**
**11.11.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.11.2025 1.10 p.m.**

**<><><><>**

ಮುಖ್ಯಾಂಶಗಳು

1. ದೆಹಲಿ ಸ್ಫೋಟ ಪ್ರಕರಣ; ಉನ್ನತಮಟ್ಟದ ಸಭೆಯಲ್ಲಿ ಭದ್ರತಾ ಪರಿಸ್ಥಿತಿ ಪರಾಮರ್ಶಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ
2. ಸ್ಫೋಟದ ಸಂಚು ಕೋರರ ಪತ್ತೆಗೆ ಕ್ರಮ; ತಪ್ಪಿತಸ್ಥರಿಗೆ ಶಿಕ್ಷೆ- ಪ್ರಧಾನಿ ನರೇಂದ್ರ ಮೋದಿ
3. ಬಿಹಾರದಲ್ಲಿ ಎರಡನೇ ಹಂತದ ಚುನಾವಣೆ; ೧೨೨ ಕ್ಷೇತ್ರಗಳಲ್ಲಿ ಬಿರುಸಿನ ಮತದಾನ
4. ಹಸಿರು ಜಲಜನಕ ಉತ್ಪಾದನೆಯಲ್ಲಿ ಭಾರತ ಜಾಗತಿಕ ನಾಯಕನಾಗಿ ಹೊರಹೊಮ್ಮಲಿದೆ - ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ
5. ಹಂಗೇರಿಯನ್ ಬ್ರಿಟಿಷ್ ಲೇಖಕ ಡೇವಿಡ್ ಸಲೋಯ್ ಅವರಿಗೆ ಈ ಸಾಲಿನ ಬೂಕರ್ ಪ್ರಶಸ್ತಿ

<><><><>

ನವದೆಹಲಿಯ ಕೆಂಪು ಕೋಟೆ ಬಳಿ ನಿನ್ನೆ ಸಂಜೆ ನಡೆದ ಕಾರು ಸ್ಫೋಟದ ನಂತರದ ಪರಿಸ್ಥಿತಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ದೆಹಲಿಯ ಕರ್ತವ್ಯ ಭವನದಲ್ಲಿ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ, ಗುಪ್ತದಳದ ನಿರ್ದೇಶಕರು, ದೆಹಲಿ ಪೊಲೀಸ್ ಆಯುಕ್ತರು ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ ಮಹಾನಿರ್ದೇಶಕರು ಭಾಗವಹಿಸಿದ್ದರು.

ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕರು ವರ್ಚುವಲ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು. ಘಟನೆಯ ನಂತರ ಎಲ್ಲಾ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಸ್ಫೋಟದ ಕಾರಣ ಮತ್ತು ಸಂದರ್ಭಗಳನ್ನು ನಿರ್ಧರಿಸಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಾಮಾನ್ಯ ಸ್ಥಿತಿಯನ್ನು ಪುನರ್ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ದೆಹಲಿಯ ಕೆಂಪು ಕೋಟೆ ಬಳಿ ನಿನ್ನೆ ಕಾರಿನಲ್ಲಿ ಸಂಭವಿಸಿದ ಸ್ಫೋಟದಲ್ಲಿ ಎಂಟು ಜನರು ಸಾವನ್ನಪ್ಪಿದರು ಮತ್ತು ಹಲವಾರು ಜನರು ಗಾಯಗೊಂಡರು. ದೆಹಲಿ ಪೊಲೀಸ್, ಎನ್ಐಎ, ಎನ್ಎಸ್ಜಿ ಮತ್ತು ವಿಧಿವಿಜ್ಞಾನ ತಂಡಗಳು ತನಿಖೆಯನ್ನು ಪ್ರಾರಂಭಿಸಿವೆ ಮತ್ತು ಸ್ಫೋಟದ ನಿಖರವಾದ ವಿವರಗಳನ್ನು ಶೀಘ್ರದಲ್ಲೇ ಬಹಿರಂಗಪಡಿಸಲಾಗುವುದು ಎಂದು ಅಮಿತ್ ಶಾ ಹೇಳಿದರು.

**ಧ್ವನಿ: ಅಮಿತ್ ಶಾ ( ೨೪ ಸೆಕೆಂಡ್ಸ್ )**

ಪ್ರಧಾನಿ ನರೇಂದ್ರ ಮೋದಿ ಅವರು ಸ್ಫೋಟದ ನಂತರ ಪರಿಸ್ಥಿತಿಯನ್ನು ಅವಲೋಕಿಸಿ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತನಾಡಿ ಮಾಹಿತಿ ಪಡೆದುಕೊಂಡರು. ಕಾರು ಸ್ಫೋಟದ ಸ್ಥಳಕ್ಕೆ ಅಮಿತ್ ಶಾ ಭೇಟಿ ನೀಡಿ ಎಲ್ಎನ್ಜೆಪಿ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿ ಮಾಡಿ ಸ್ಫೋಟದ ಬಗ್ಗೆ ಸಂಪೂರ್ಣ ತನಿಖೆ ನಡೆಸುವುದಾಗಿ ಭರವಸೆ ನೀಡಿದರು.

<><><><>

ಭೂತಾನಿನ ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರ ೭೦ ನೇ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಭೂತಾನ್‌ಗೆ ಆಗಮಿಸಿದರು. ಅವರನ್ನು ಪಾರೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭೂತಾನ್ ಪ್ರಧಾನಿ ತ್ಸೆರಿಂಗ್ ಟೋಬ್ಗೇ ಅವರು ಆತ್ಮೀಯವಾಗಿ

ಬರಮಾಡಿಕೊಂಡರು.   ತಿಂಪುವಿನಲ್ಲಿ ನಡೆದ ಜನ್ಮದಿನ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ, ಭೂತಾನ್‌ನಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ರಕ್ಷಿಸಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಲ್ಲಿನ ರಾಜಮನೆತನ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿದೆ. ಭಾರತ ಮತ್ತು ಭೂತಾನ್ ನಡುವಿನ ಬಾಂಧವ್ಯ ಅತ್ಯಂತ ಗಹನವಾಗಿದೆ ಎಂದರು. ವಿಶ್ವಶಾಂತಿ ಇಂದಿನ ಅಗತ್ಯವಾಗಿದೆ. ಕಳೆದ ರಾತ್ರಿ ದೆಹಲಿಯಲ್ಲಿ ಆದ ಸ್ಫೋಟ ಖಂಡನೀಯ. ಸಂತ್ರಸ್ತರ ದುಃಖದೊಂದಿಗೆ ಇಡೀ ದೇಶ ನಿಂತಿದೆ. ಘಟನೆ ನಂತರ ವಿವಿಧ ತನಿಖಾ ಸಂಸ್ಥೆಗಳ ಜೊತೆ ಸಂಪರ್ಕದಲ್ಲಿದ್ದು, ಮಾಹಿತಿ ಪಡೆದುಕೊಂಡಿದ್ದೇನೆ. ನಮ್ಮ ತನಿಖಾ ಸಂಸ್ಥೆಗಳು ಈ ಷಡ್ಯಂತ್ರವನ್ನು ಬಯಲಿಗೆಳೆಯಲಿವೆ. ಸ್ಫೋಟಕ್ಕೆ ಕಾರಣರಾದವರನ್ನು ಪತ್ತೆ ಹಚ್ಚಿ ಕ್ರಮಕೈಗೊಳ್ಳುತ್ತವೆ ಎಂದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ (  ೪೨  ಸೆಕೆಂಡ್ಸ್)**

ಭೇಟಿಯ ಸಮಯದಲ್ಲಿ, ಪ್ರಧಾನಮಂತ್ರಿ ಅವರು, ಪುನತ್ಸಂಗ್ಚು-ಖಖ ಜಲವಿದ್ಯುತ್ ಯೋಜನೆಯನ್ನು ಸಹ ಉದ್ಘಾಟಿಸಲಿದ್ದಾರೆ. ಚಾಂಗ್ಲಿಮಿಥಾಂಗ್‌ನಲ್ಲಿ ನಡೆಯುತ್ತಿರುವ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದ ಪವಿತ್ರ ಕಾಲಚಕ್ರ ಸಬಲೀಕರಣ ವಿಭಾಗದ ಗೌರವಾರ್ಥವಾಗಿ ಬೂತಾನ್ ನಲ್ಲಿ ನಾಳೆಯಿಂದ ಮೂರು ದಿನಗಳ ಕಾಲ ವಿಶೇಷ ರಾಷ್ಟ್ರೀಯ ರಜೆ ಘೋಷಿಸಿದೆ.

<><><><>

ದೆಹಲಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಕಾರಣರಾದವರನ್ನು ಪತ್ತೆ ಮಾಡಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವುದಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ದೆಹಲಿಯಲ್ಲಿಂದು ರಕ್ಷಣಾ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇದು ದುರ್ಘನೆಯ ಬಗ್ಗೆ ಆಳವಾದ ತನಿಖೆ ನಡೆಯುತ್ತಿದೆ. ತನಿಖೆಯ ಪ್ರಗತಿಯ ಬಗ್ಗೆ

ಸಾರ್ವಜನಿಕರಿಗೆ ಶೀಘ್ರದಲ್ಲೇ ಮಾಹಿತಿ ನೀಡುತ್ತೇವೆ. ಈ ಭೀಕರ ಘಟನೆ ಖಂಡನೀಯ ಎಂದರು.

<><><><>

ಬಿಹಾರದಲ್ಲಿ ಇಂದು ಎರಡನೇ ಮತ್ತು ಅಂತಿಮ ಹಂತದ ವಿಧಾನಸಭಾ ಚುನಾವಣೆ ಪ್ರಗತಿಯಲ್ಲಿದೆ. ಆರಂಭಿಕ ಹಂತದಲ್ಲಿ ಬಿರುಸಿನ ಮತದಾನವಾಗುತ್ತಿದ್ದು, ಬೆಳಗ್ಗೆ ೧೧ ಗಂಟೆ ವೇಳೆಗೆ ಶೇಕಡ ೩೧.೩೮ ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ೨೦ ಜಿಲ್ಲೆಗಳಲ್ಲಿರುವ ೧೨೨ ಕ್ಷೇತ್ರಗಳಿಗೆ ಈ ಹಂತದಲ್ಲಿ ಮತದಾನ ನಡೆಯುತ್ತಿದೆ. ೧೩೬ ಮಹಿಳೆಯರು ಸೇರಿ ೩ ಕೋಟಿ ೭೦ ಲಕ್ಷಕ್ಕೂ ಹೆಚ್ಚು ಮತದಾರರು ಒಂದು ಸಾವಿರದ ೩೦೨ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ಭದ್ರತಾ ಕಾರಣಗಳಿಗಾಗಿ ಸಂಜೆ ೫ ಗಂಟೆಗೆ ಕೊನೆಗೊಳ್ಳುವ ೭ ಕ್ಷೇತ್ರಗಳನ್ನು ಹೊರತುಪಡಿಸಿ, ಮತದಾನ ಬೆಳಿಗ್ಗೆ ೭ ಗಂಟೆಗೆ ಪ್ರಾರಂಭವಾಗಿ ಸಂಜೆ ೬ ಗಂಟೆಗೆ ಮುಕ್ತಾಯಗೊಳ್ಳಲಿದೆ. ಭದ್ರತಾ ದೃಷ್ಟಿಯಿಂದ, ನೇಪಾಳಕ್ಕೆ ಹೊಂದಿಕೊಂಡಿರುವ ಗಡಿಗಳು ಮತ್ತು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಜಾರ್ಖಂಡ್‌ನ ಅಂತರರಾಜ್ಯ ಗಡಿಗಳನ್ನು ಮುಚ್ಚಲಾಗಿದೆ. ಜೈನಗರ, ಮಧುಬನಿ ಮತ್ತು ನೇಪಾಳದ ಜನಕ್‌ಪುರ ನಡುವಿನ ಮೈತ್ರಿ ಎಕ್ಸ್‌ಪ್ರೆಸ್ ರೈಲು ಸೇವೆಯ ಕಾರ್ಯಾಚರಣೆಯನ್ನು ಮತದಾನ ಪೂರ್ಣಗೊಳ್ಳುವವರೆಗೆ ಸ್ಥಗಿತಗೊಳಿಸಲಾಗಿದೆ. ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ಚುನಾವಣಾ ಆಯೋಗ ಪಾಟ್ನಾದ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯಲ್ಲಿ ಅತ್ಯಾಧುನಿಕ ನಿಯಂತ್ರಣ ಮತ್ತು ಕಮಾಂಡ್ ಕೇಂದ್ರವನ್ನು ಸ್ಥಾಪಿಸಿದೆ. ಎಲ್ಲಾ ೨೦ ಜಿಲ್ಲಾ ಕೇಂದ್ರಗಳಲ್ಲಿಯೂ ಇದೇ ರೀತಿಯ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಮಹಿಳಾ ಸಬಲೀಕರಣದ ಸಂದೇಶವನ್ನು ರವಾನಿಸಲು, ೫೯೫ ಮತಗಟ್ಟೆಗಳನ್ನು ಸಂಪೂರ್ಣವಾಗಿ ಮಹಿಳಾ

ಚುನಾವಣಾ ಸಿಬ್ಬಂದಿ ಹಾಗೂ ೨೧ ಪಿಡಬ್ಲ್ಯೂಡಿ ಮತಗಟ್ಟೆಗಳನ್ನು ವಿಶೇಷಚೇತನ ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ. ಹೆಚ್ಚುವರಿಯಾಗಿ, ೩೧೬ ಮಾದರಿ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೊದಲ ಹಂತದ ಚುನಾವಣೆ ಈ ತಿಂಗಳ ೬ ರಂದು ನಡೆದಿದ್ದು, ಇದು ಸುಮಾರು ೬೫ ಪ್ರತಿಶತದಷ್ಟು ದಾಖಲೆಯ ಮತದಾನಕ್ಕೆ ಸಾಕ್ಷಿಯಾಗಿದೆ. ಮತ ಎಣಿಕೆಯನ್ನು ಈ ತಿಂಗಳ ೧೪ ರಂದು ಕೈಗೊಳ್ಳಲಾಗುವುದು.

<><><><>

ಹಸಿರು ಜಲಜನಕ ಉತ್ಪಾದನೆಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮುವ ಮಹತ್ವಾಕಾಂಕ್ಷೆ ಹೊಂದಿದೆ ಎಂದು ಕೇಂದ್ರ ನವ ಮತ್ತು ನವೀಕೃತ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ನವದೆಹಲಿಯಲ್ಲಿಂದು ಮೂರನೇ ಅಂತರಾಷ್ಟ್ರೀಯ ಹಸಿರು ಜಲಜನಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಹಸಿರು ಜಲಜನಕ ಉತ್ಪಾದನೆ ಮತ್ತು ರಫ್ತು ಚಟುವಟಿಕೆಗೆ ಉತ್ತೇಜನ ನೀಡಲಾಗಿದೆ. ಹಸಿರು ಜಲಜನಕ ಅಭಿಯಾನದಡಿ ಇಡೀ ಭೂಮಂಡಲಕ್ಕೆ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡಲು ಕಾರ್ಯಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

<><><><>

ಹಂಗೇರಿಯನ್ ಬ್ರಿಟಿಷ್ ಲೇಖಕ ಡೇವಿಡ್ ಸಲೋಯ್ ಅವರಿಗೆ ಈ ಸಾಲಿನ ಬೂಕರ್ ಪ್ರಶಸ್ತಿ ಲಭಿಸಿದೆ. ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಹಂಗೇರಿಯನ್ ಬ್ರಿಟಿಷ್ ಲೇಖಕ ಡೇವಿಡ್ ಸಾಲ್ಯೆ ಅವರನ್ನು ಅವರ 'ಫ್ಲೆಶ್' ಕಾದಂಬರಿಗಾಗಿ ೨೦೨೫ ರ ಬೂಕರ್ ಪ್ರಶಸ್ತಿ ವಿಜೇತ ಎಂದು ಪ್ರಕಟಿಸಲಾಯಿತು. ಈ ಹಿಂದೆ ೨೦೧೬ ರಲ್ಲಿ ಅವರ ಆಲ್ ದಟ್ ಮ್ಯಾನ್ ಈಸ್ ಕಾದಂಬರಿಗಾಗಿ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಹಂಗೇರಿಯನ್ ವಸತಿ ಎಸ್ಟೇಟ್‌ನಿಂದ ಲಂಡನ್‌ನ ಶ್ರೀಮಂತ ಗಣ್ಯರ ಮಹಲುಗಳವರೆಗೆ ದಶಕಗಳ ಕಾಲದ ಅನುಭವಗಳನ್ನು ಭಾವನಾತ್ಮಕವಾಗಿ

ಚಿತ್ರಿಸಿದ್ದಾರೆ. ಈ ಕಾದಂಬರಿ ಡೇವಿಡ್ ಸಲೋಯ್ ಅವರ ಆರನೇ ಕಾದಂಬರಿ. ಅವರು ಸ್ಪ್ರಿಂಗ್ ಮತ್ತು ದಿ ಇನ್ನೋಸೆಂಟ್ ಕಾದಂಬರಿಗಳ ಜೊತೆಗೆ ಟರ್ಬುಲೆನ್ಸ್ ಎಂಬ ಸಣ್ಣ ಕಥಾ ಸಂಕಲನವನ್ನೂ ಸಹ ರಚಿಸಿದ್ದಾರೆ.

<><><><>

ಮೊದಲ ಮಹಾಯುದ್ಧ ಅಂತ್ಯವಾದ ೧೦೭ ನೇ ವಾರ್ಷಿಕೋತ್ಸವವನ್ನು ಇಂದು ಪುದುಚೇರಿಯಲ್ಲಿ ಆಚರಿಸಲಾಯಿತು. ಪುದುಚೇರಿ ಸರ್ಕಾರ ಮತ್ತು ಫ್ರೆಂಚ್ ರಾಯಭಾರಿ ಕಚೇರಿ ಜಂಟಿಯಾಗಿ ಈ ಕಾರ್ಯಕ್ರಮ ಆಯೋಜಿಸಿತ್ತು. ನವೆಂಬರ್ ೧೯೧೮ ರಲ್ಲಿ ಈ ದಿನದಂದು ಮೊದಲ ಮಹಾಯುದ್ಧದ ಮಿತ್ರರಾಷ್ಟ್ರಗಳು ಮತ್ತು ಜರ್ಮನಿಯ ನಡುವೆ ಯುದ್ಧವನ್ನು ನಿಲ್ಲಿಸಲು ಕದನವಿರಾಮ ಒಪ್ಪಂದಕ್ಕೆ ಸಹಿ ಹಾಕಲಾಯಿತು.

<><><><>

ಭಾರತದ ಖ್ಯಾತ ಪಕ್ಷಿ ತಜ್ಞ, ಪದ್ಮವಿಭೂಷಣ ಡಾಕ್ಟರ್ ಸಲೀಂ ಮೋಯಿಜುದ್ದೀನ್ ಅಬ್ದುಲ್ ಅಲಿ, ಅವರ ೧೨೯ನೇ ಜನ್ಮ ದಿನಾಚರಣೆ ಪ್ರಯುಕ್ತ ಧಾರವಾಡದ, ನೇಚರ್ ರಿಸರ್ಚ್ ಸೆಂಟರ್, ನಾಳೆ ಬೆಳಗ್ಗೆ ೭ ಗಂಟೆಗೆ, ಕರ್ನಾಟಕ ವಿಶ್ವವಿದ್ಯಾಲಯದ, ಸಸ್ಯೋದ್ಯಾನದಲ್ಲಿ ಪಕ್ಷಿ ವೀಕ್ಷಣೆ ಹಾಗೂ ಗಣತಿ ಆಯೋಜಿಸಿದೆ. ೫೦ಕ್ಕೂ ಹೆಚ್ಚು ಜನ ಪರಿಸರಾಸಕ್ತರು ಪಾಲ್ಗೊಳ್ಳಲಿದ್ದಾರೆ.

<><><><>

ಇರಾಕ್‌ನಲ್ಲಿ, ಹೊಸ ಸಂಸತ್ ಅನ್ನು ಆಯ್ಕೆ ಮಾಡಲು ದೇಶಾದ್ಯಂತ ಮತದಾನ ನಡೆಯುತ್ತಿದೆ. ಮತದಾರರು ೩೨೯ ಸಂಸತ್ ಸದಸ್ಯರನ್ನು ಆಯ್ಕೆ ಮಾಡಲಿದ್ದಾರೆ, ಇದರಲ್ಲಿ ೮೩ ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿದ್ದು, ವಿವಿಧ ರಾಜಕೀಯ ಪಕ್ಷಗಳಿಂದ ೭,೭೪೪ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಈ ಚುನಾವಣೆಯಲ್ಲಿ ಮಾಜಿ

ಪ್ರಧಾನಿ ನೂರಿ ಅಲ್-ಮಲಿಕಿ ನೇತೃತ್ವದ ಪ್ರಬಲ ಶಿಯಾ ಬಣ ಮತ್ತು ಪ್ರಸ್ತುತ ಪ್ರಧಾನಿ ಮೊಹಮ್ಮದ್ ಶಿಯಾ ಅಲ್-ಸುಡಾನಿ ನೇತೃತ್ವದ ಒಕ್ಕೂಟ ಭಾಗವಹಿಸಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>